**Witness present and duly sworn on : 09.03.2026.**

**Further Cross Examination by learned counsel for complainant:-**

ನಿಡಿ ***4*** ನನ್ನ ಮತ್ತು ಪಿರ್ಯಾದುದಾರರ ನಡುವೆ ನಡೆದಿರುವ ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲೆ ಅಲ್ಲ. ನಿಡಿ ***4*** ದಾಖಲೆಯು ***purchase order*** ಗೆ ಸಂಬಂಧಪಟ್ಟ ದಾಖಲೆಯಾಗಿರುತ್ತದೆ. ಸಾಕ್ಷಿಯು ಮುಂದುವರೆದು ಬೇರೆ ಕಂಪನಿಯಿಂದ ಅವರಿಗೆ ಬಂದಿರುವಂತಹಾ ***purchase order*** ಎಂದು ನುಡಿಯುತ್ತಾರೆ. ನಿಡಿ ***4*** ದಾಖಲೆಯು ಟಿ ಟಿ ಕಂಪನಿಂದ ನಮ್ಮ ಕಂಪನಿಗೆ ನೀಡಿರುವ ದಾಖಲೆಯಾಗಿರುತ್ತದೆ. ನನ್ನ ಪ್ರತ್ಯುತ್ತರದಲ್ಲಿ ಪೋಲೀಸ್ ದೂರು ನೀಡಿರುವ ಬಗ್ಗೆ ಹೇಳಿದ್ದು ದೂರಿನ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ ಆದರೆ ಅಗತ್ಯವಿದ್ದಲ್ಲಿ ಹಾಜರುಪಡಿಸುತ್ತೇನೆ. ನಿಡಿ ***2*** ರಲ್ಲಿ ಕೇವಲ ಅದರಲ್ಲಿ ಕಾಣಿಸಿರುವ ಚೆಕ್ಕಿಗೆ ಸಂಬಂಧಪಟ್ಟಂತೆ ಮಾತ್ರ ***stop payment instruction*** ನೀಡಿದ್ದು ಎಲ್ಲಾ ***17*** ಚೆಕ್ಕುಗಳಿಗೆ ಸಂಬಂಧ ಪಟ್ಟಂತೆ ***stop payment instruction*** ನೀಡಿಲ್ಲ ಎಂದರೆ ಸರಿಯಲ್ಲ. ನಿಡಿ ***5*** ಟಿ ಟಿ ಕಂಪನಿಗೆ ಸಂಬಂಧಪಟ್ಟಂತಹಾ ದಾಖಲೆಯಾಗಿರುತ್ತದೆ. ಅದು ಟಿ ಟಿ ಕಂಪನಿಗೆ ಸಂಬಂಧಪಟ್ಟ ದಾಖಲೆಯಾಗಿರುವ ಕಾರಣ ನಮ್ಮ ಕಂಪನಿಗೂ ಸದರಿ ದಾಖಲೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಡಿ ***5*** ರಲ್ಲಿ ಕಾಣಿಸಿರುವ ಜಿ ಎಸ್ ಟಿ ಗೂ ಮತ್ತು ಎಸ್ ಬಿ ಎಂ ಕಂಪನಿಯ ಜಿ ಎಸ್ ಟಿ ಗೂ ಯಾವುದೇ ರೀತಿ ಯ ಸಂಬಂಧ ಇಲ್ಲ ಎಂದು ಸಂಬಂಧ ಇದೆ ಎಂದು ಕಲ್ಪಿಸುವ ಸಲುವಾಗಿ ನಿಡಿ ***5*** ದಾಖಲೆಯನ್ನು ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ನಿಡಿ ***6*** ರಲ್ಲಿ ಎಸ್ ಬಿ ಎಂ ಕಂಪನಿಯ ಸೀಲು

ಮತ್ತು ಸಹಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ಈ ಹಂತದಲ್ಲಿ ಪಿರ್ಯಾದುದಾರರಿಗೆ ನೀಡಿರುವ ನಿಡಿ ***6*** ರ ಪ್ರತಿಯನ್ನು ಪರಿಶೀಲಿಸಲಾಗಿ ಅದರಲ್ಲಿ ಎಸ್ ಬಿ ಎಂ ಎಲೆಕ್ಟ್ರಿಕಲ್ಸ್ ನ ಪರವಾಗಿ ಸಹಿ ಕಂಡುಬಂದಿರುವುದಿಲ್ಲ. ನಿಡಿ ***6*** ದಾಖಲೆಯನ್ನು ನಮ್ಮ ಕಚೇರಿಯಲ್ಲಿ ತಯಾರಿಸಿದ ಇನ್ವಾಯಿಸ್ ಎಂದರೆ ಸರಿ. ನಿಡಿ ***6*** ಅನ್ನು ಟಿ ಟಿ ಕಂಪನಿಯವರಿಗೆ ಕಳುಹಿಸಿರುವ ಬಗ್ಗೆ ಅವರ ಸಹಿಯಾಗಲೀ ಸೀಲ್ ಆಗಲೀ ಕಂಡುಬರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮೇಲ್ ಮೂಲಕ ಕಳುಹಿಸಿದ್ದೇವೆ ಎಂದು ನುಡಿಯುತ್ತಾರೆ. ನಿಡಿ ***6*** ದಾಖಲೆಗೂ ನಮ್ಮ ಮತ್ತು ಪಿರ್ಯಾದುದಾರರ ನಡುವಿನ ವ್ಯವಹಾರಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲ. ನಿಡಿ ***7*** ದಾಖಲೆಯು ಟಿ ಟಿ ಸಂಸ್ಥೆಗೆ ಸಂಬಂಧಿಸಿದ ದಾಖಲೆಯಾಗಿರುತ್ತದೆ. ನಿಡಿ ***6*** ಮತ್ತು ***7*** ದಾಖಲೆಯು ಪಿರ್ಯಾದುದಾರರ ಸಂಸ್ಥೆಗೆ ಯಾವುದೇ ರೀತಿಯಲ್ಲಿ ಸಂಬಂಧ ಪಟ್ಟಿಲ್ಲ. ನಿಡಿ ***7*** ದಾಖಲೆಯು ನಮ್ಮ ಮತ್ತು ಪಿರ್ಯಾದುದಾರರ ಸಂಸ್ಥೆಯ ನಡುವೆ ನಡೆದಿರುವ ವ್ಯವಹಾರಕ್ಕೆ ಸಂಬಂಧಪಟ್ಟಿಲ್ಲ. ಸಾಕ್ಷಿಗೆ ಈ ಹಂತದಲ್ಲಿ ದಿಃ***29.01.2021*** ರಲ್ಲಿ ***additional power supply*** ಪಡೆದುಕೊಳ್ಳುವ ಬಗ್ಗೆ ನೀಡಿದ್ದಾರೆ ಎನ್ನಲಾದ ದಾಖಲೆಯ ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯ ಬಗ್ಗೆ ಪರಿಶೀಲನೆ ಮಾಡದೇ ಹೇಳಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ನಿಪಿ ***18*** ರ ಆಧಾರ ಮೇರೆಗೆ ಪಿರ್ಯಾದುದಾರರಿಗೆ ನಾವು ವರ್ಕ್ ಆರ್ಡರ್ ನೀಡಿದ್ದೇವೆ ಎಂದರೆ ಸರಿಯಲ್ಲ. ನಿಡಿ ***5*** ಮತ್ತು ನಿಡಿ ***7*** ದಾಖಲೆಗಳಲ್ಲಿ ಕಂಡುಬರುವ ಜಿ ಎಸ್ ಟಿ ನಂಬರ್ ನಮ್ಮ ಸಂಸ್ಥೆಗೆ ಸಂಬಂಧಪಟ್ಟ ಜಿ ಎಸ್ ಟಿ ನಂಬರ್ ಆಗಿರುತ್ತದೆ. ನಿಡಿ ***5,*** ನಿಡಿ ***7*** ಮತ್ತು ನಿಪಿ ***17(ಎ)*** ರಲ್ಲಿ ಕಂಡುಬರುವ ಜಿ ಎಸ್ ಟಿ ನಂಬರ್ ನಮ್ಮ ಸಂಸ್ಥೆಗೆ ಸಂಬಂಧಪಟ್ಟಿದೆ. ಸಾಕ್ಷಿಯು ಜಿ

ಎಸ್ ಟಿ ನಂಬರ್ ಮಾತ್ರ ನಮ್ಮ ಸಂಸ್ಥೆಗೆ ಸಂಬಂಧಪಟ್ಟಿದೆ ಎಂದು ನುಡಿಯುತ್ತಾರೆ. ನಿಡಿ ***1 certificate u/sec.63 BNSS*** ರಲ್ಲಿ ***online payment*** ಬಗ್ಗೆ ವಿವರವಾಗಿ ಹೇಳಿಲ್ಲ ಎಂದರೆ ಸರಿಯಲ್ಲ. ನಿಡಿ ***4*** ರಿಂದ ***7*** ರ ಬಗ್ಗೆ ***certificate u/sec.63 BNSS*** ಮಾಡಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ದಾಖಲೆಗಳ ನೈಜತೆಯ ಬಗ್ಗೆ ಸರ್ಟಿಫಿಕೇಟ್ ನೀಡದೇ ಇದ್ದರೂ ಕೂಡ ನೀಡಿದ್ದೇವೆ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ ***1*** ರೊಂದಿಗೆ ಲಗತ್ತಿಸಿರುವ ಸರ್ಟಿಫಿಕೇಟ್ ನಲ್ಲಿ ಯಾವೆಲ್ಲಾ ದಾಖಲೆಗಳನ್ನು ಅದರಡಿಯಲ್ಲಿ ಹಾಜರುಪಡಿಸುತ್ತಿದ್ದೇವೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ನಿಡಿ ***6*** ಮತ್ತು ನಿಡಿ ***7*** ಈ ಕೇಸಿಗೆ ಸಂಬಂಧಪಡದ ದಾಖಲೆಯಾಗಿದ್ದು ಅದನ್ನು ಸೃಷ್ಟಿ ಹಾಜರುಪಡಿದ್ದೇವೆ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರಿಗೆ ಚೆಕ್ಕಿನ ಮೊತ್ತ ನೀಡಲು ಬಾಧ್ಯಸ್ತನಾಗಿದ್ದರೂ ಕೂಡ ಬಾಧ್ಯಸ್ತನಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(Computerized as per my dictation in open court)
R.O.I.&.A.C.

XXII ADDL.JUDGE,
Court of Small Causes,
Bengaluru.